**National**
**Kannada**
**22.07.2025 / 1.10pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ವಿರೋಧ ಪಕ್ಷಗಳ ಗದ್ದಲ ; ಸಂಸತ್ತಿನ ಉಭಯ ಸದನಗಳ ಕಲಾಪ ಮಧ್ಯಾಹ್ನ ೨ ಗಂಟೆಗೆ ಮುಂದೂಡಿಕೆ
2. ಬಿಹಾರದಲ್ಲಿ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಹಿಂಪಡೆಯುವಂತೆ ಒತ್ತಾಯಿಸಿ ವಿಪಕ್ಷಗಳಿಂದ ಪ್ರತಿಭಟನೆ
3. ಶ್ರೀಹರಿಕೋಟಾದಿಂದ ಇದೇ ೩೦ರಂದು ನಿಸಾರ್ ಭೂವೀಕ್ಷಣಾ ಉಪಗ್ರಹ ಉಡಾವಣೆ
4. ಫಿಡೆ ಮಹಿಳಾ ಚೆಸ್ ವಿಶ್ವಕಪ್; ಸೆಮಿಫೈನಲ್‌ನಲ್ಲಿಂದು ಕೊನೆರು ಹಂಪಿ-ಲೀ ಟಿಂಗ್ಜಿ ಮುಖಾಮುಖಿ
5. ಮಹಿಳಾ ಏಕದಿನ ಕ್ರಿಕೆಟ್; ನಿರ್ಣಾಯಕ ಪಂದ್ಯದಲ್ಲಿ ಇಂದು ಭಾರತ - ಇಂಗ್ಲೆಂಡ್ ಸೆಣಸಾಟ

**<><><>**

ವಿವಿಧ ವಿಷಯಗಳ ಚರ್ಚೆಗೆ ಆಗ್ರಹಿಸಿ ವಿರೋಧ ಪಕ್ಷದ ಸದಸ್ಯರ ಘೋಷಣೆಗಳ ನಡುವೆ ಲೋಕಸಭೆ ಮತ್ತು ರಾಜ್ಯಸಭೆಯನ್ನು ಮಧ್ಯಾಹ್ನ ೨ ಗಂಟೆಯವರೆಗೆ ಮುಂದೂಡಲಾಗಿದೆ. ಲೋಕಸಭೆ ಬೆಳಗ್ಗೆ ೧೧ ಗಂಟೆಗೆ ಸದನ ಸೇರಿದಾಗ, ಲೋಕಸಭಾಧ್ಯಕ್ಷ ಓಂ ಬಿರ್ಲಾ ಪ್ರಶ್ನೋತ್ತರ ಅವಧಿಯನ್ನು ಕೈಗೆತ್ತಿಕೊಂಡರು. ವಿರೋಧ ಪಕ್ಷದ ಸದಸ್ಯರು ಆಪರೇಷನ್ ಸಿಂದೂರ್, ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಸೇರಿದಂತೆ ಇತರೆ ವಿಷಯಗಳ ಕುರಿತು ಚರ್ಚೆಗೆ ಒತ್ತಾಯಿಸಿ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು. ಪ್ರಶ್ನೆಗಳು ಕೃಷಿ ಮತ್ತು ರೈತರಿಗೆ ಸಂಬಂಧಿಸಿರುವುದರಿಂದ ಪ್ರಶ್ನೋತ್ತರ ಅವಧಿಗೆ ಅವಕಾಶ ನೀಡುವಂತೆ ಲೋಕಸಭಾಧ್ಯಕ್ಷರು, ವಿರೋಧ ಪಕ್ಷಗಳಿಗೆ ಮನವಿ ಮಾಡಿದರು. ಆದರೆ ವಿರೋಧ ಪಕ್ಷದ ಸದಸ್ಯರು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದರು. ಇದರಿಂದಾಗಿ ಲೋಕಸಭಾಧ್ಯಕ್ಷರು, ಸದನವನ್ನು ಮಧ್ಯಾಹ್ನ ೧೨ ಗಂಟೆಯವರೆಗೆ ಮುಂದೂಡಿದರು. ಆದರೆ ೧೨ ಗಂಟೆಗೆ ಸದನ ಮತ್ತೆ ಸೇರಿದಾಗ ಪ್ರತಿಪಕ್ಷಗಳ ಗದ್ದಲ ಮುಂದುವರಿದರಿಂದ ಕಲಾಪವನ್ನು ಮಧ್ಯಾಹ್ನ ೨ ಗಂಟೆಗೆ ಮುಂದೂಡಲಾಯಿತು. ಇನ್ನೊಂದೆಡೆ, ರಾಜ್ಯಸಭೆಯಲ್ಲಿ ಬೆಳಗ್ಗೆ ೧೧ ಗಂಟೆಗೆ ಸದನ ಸಭೆ ಸೇರಿದಾಗ, ವಿರೋಧ ಪಕ್ಷದ ಸದಸ್ಯರು, ಬಿಹಾರದಲ್ಲಿ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ ಕುರಿತು ಚರ್ಚೆಗೆ ಒತ್ತಾಯಿಸಿದರು. ಆದರೆ ರಾಜ್ಯಸಭೆ ಉಪಸಭಾಪತಿ ಹರಿವಂಶ್ ನಾರಾಯಣ್ ಸಿಂಗ್ ಬೇಡಿಕೆಯನ್ನು ತಿರಸ್ಕರಿಸಿದರು. ವಿರೋಧ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುವುದನ್ನು ಮುಂದುವರಿಸಿದ್ದರಿಂದ ಸದನವನ್ನು ಮುಂದೂಡಲಾಯಿತು. ನಂತರ ೧೨ ಗಂಟೆಗೆ ಸದನ ಮತ್ತೆ ಸೇರಿದಾಗ ಪ್ರತಿಪಕ್ಷಗಳ ಗದ್ದಲ ಮುಂದುವರಿದರಿಂದ ಕಲಾಪವನ್ನು ಮಧ್ಯಾಹ್ನ ೨ ಗಂಟೆಗೆ ಮುಂದೂಡಲಾಯಿತು.

**<><><>**

ಕಲಾಪದ ಮುನ್ನ ಸಂಸತ್ ಭವನ ಸಂಕೀರ್ಣದಲ್ಲಿ ಇಂದು ಐ.ಎನ್.ಡಿ.ಐ. ಮೈತ್ರಿಕೂಟದ ನಾಯಕರ ಸಭೆ ನಡೆಯಿತು. ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಐ.ಎನ್.ಡಿ.ಐ. ಮೈತ್ರಿಕೂಟದ ವಿವಿಧ ಪಕ್ಷಗಳಅನೇಕ ಸಂಸತ್ ಸದಸ್ಯರು ಭಾಗವಹಿಸಿದ್ದರು. ಸಂಸತ್ತಿನ ಮಳೆಗಾಲದ ಅಧಿವೇಶನಕ್ಕೆ ಸಾಮಾನ್ಯ ಕಾರ್ಯತಂತ್ರದ ಕುರಿತು ಮೈತ್ರಿಕೂಟದ ನಾಯಕರು ಚರ್ಚಿಸಿದರು.

**<><><>**

ಬಿಹಾರದಲ್ಲಿ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ವಿರೋಧಿಸಿ ಸಂಸತ್ತಿನ ಮಕರ ದ್ವಾರದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ವಿರೋಧ ಪಕ್ಷದ ಸಂಸದರು ಪ್ರತಿಭಟನೆ ನಡೆಸಿದರು. ಸರ್ಕಾರವು ಪರಿಶೀಲನೆಯ ಉದ್ದೇಶ ಮತ್ತು ಕಾನೂನುಬದ್ಧತೆಯನ್ನು ಸ್ಪಷ್ಟಪಡಿಸಬೇಕೆಂದು ಫಲಕಗಳನ್ನು ಹಿಡಿದು ಅವರು ಘೋಷಣೆಗಳನ್ನು ಕೂಗಿದರು. ಈ ಕ್ರಮವನ್ನು ಹಿಂತೆಗೆದುಕೊಳ್ಳುವಂತೆ ಅವರು ಒತ್ತಾಯಿಸಿದರು. ಕಾಂಗ್ರೆಸ್, ಎಸ್‌ಪಿ, ಆರ್‌ಜೆಡಿ, ಟಿಎಂಸಿ, ಡಿಎಂಕೆ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ವಿರೋಧ ಪಕ್ಷದ ಸಂಸದರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**<><><>**

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ-ಇಸ್ರೋ, ಅಮೆರಿಕದ ಬಾಹ್ಯಾಕಾಶ ಸಂಸ್ಥೆ-ನಾಸಾ ಜೊತೆ ಜಂಟಿಯಾಗಿ ಅಭಿವೃದ್ಧಿಪಡಿಸಿದ **NISAR** ಭೂ ವೀಕ್ಷಣಾ ಉಪಗ್ರಹವನ್ನು ಈ ತಿಂಗಳ ೩೦ ರಂದು ಶ್ರೀಹರಿಕೋಟಾದಿಂದ ಸಂಜೆ ೫:೪೦ ಕ್ಕೆ ಉಡಾವಣೆ ಮಾಡಲಿದೆ. **GSLV F16** ಹೆವಿ ಲಿಫ್ಟ್ ರಾಕೆಟ್ ಉಪಗ್ರಹವನ್ನು ೭೪೩ ಕಿಲೋ ಮೀಟರ್ ವಿಸ್ತೀರ್ಣದ ಸೂರ್ಯ ಸಿಂಕ್ರೊನಸ್ ಕಕ್ಷೆಗೆ ಸೇರಿಸುತ್ತದೆ. **NISAR** ಉಪಗ್ರಹವು ಪ್ರತಿ ೧೨ ದಿನಗಳಿಗೊಮ್ಮೆ ಇಡೀ ಭೂಗೋಳವನ್ನು ಸ್ಕ್ಯಾನ್ ಮಾಡುತ್ತದೆ ಹಾಗೂ ಹಗಲು ಮತ್ತು ರಾತ್ರಿ ಸೇರಿದಂತೆ ಎಲ್ಲಾ ಹವಾಮಾನದಲ್ಲೂ ಮಾಹಿತಿಯನ್ನು ಒದಗಿಸುತ್ತದೆ.

**<><><><>**

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ-ಇಸ್ರೋ ಇಂದು ಚಂದ್ರಯಾನ-೨ ಉಡಾವಣೆಯ ೬ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಚಂದ್ರನ ದಕ್ಷಿಣ ಧ್ರುವದ ಮೇಲೆ ಕೇಂದ್ರೀಕರಿಸಿ, ಚಂದ್ರನ ಮೇಲ್ಮೈ, ಭೂಕಂಪಶಾಸ್ತ್ರ, ಖನಿಜ ಸಂಪತ್ತು ಮತ್ತು ಮೇಲ್ಮೈ ಸಂಯೋಜನೆಯನ್ನು ಅಧ್ಯಯನ ಮಾಡುವ ಉದ್ದೇಶವನ್ನು ಚಂದ್ರಯಾನ-೨ ಹೊಂದಿತ್ತು. ೨೦೧೯ರ ಜುಲೈ ೨೨ ರಂದು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆಯಾದ ಭಾರತದ ಎರಡನೇ ಚಂದ್ರ ಪರಿಶೋಧನಾ ಮಿಷನ್, ಪ್ರಾಥಮಿಕವಾಗಿ ಚಂದ್ರನ ಮೇಲ್ಮೈಯನ್ನು, ವಿಶೇಷವಾಗಿ ದಕ್ಷಿಣ ಧ್ರುವವನ್ನು ಅನ್ವೇಷಿಸುವ ಗುರಿಯನ್ನು ಹೊಂದಿತ್ತು. ಇದು ಆರ್ಬಿಟರ್, ಲ್ಯಾಂಡರ್-ವಿಕ್ರಮ್ ಮತ್ತು ರೋವರ್-ಪ್ರಜ್ಞಾನ್ ಅನ್ನು ಒಳಗೊಂಡಿತ್ತು. ಎಂಟು ಪ್ರಯೋಗಗಳೊಂದಿಗೆ ಸಜ್ಜುಗೊಂಡಿರುವ ಆರ್ಬಿಟರ್, ಧ್ರುವ ಪ್ರದೇಶಗಳಲ್ಲಿ ಖನಿಜಗಳು ಮತ್ತು ನೀರಿನ ಅಣುಗಳನ್ನು ಅಧ್ಯಯನ ಮಾಡುತ್ತಿದೆ.

**<><><><>**

ವಿದ್ಯಾರ್ಥಿಗಳ ಸುರಕ್ಷತೆಯನ್ನು ಮತ್ತಷ್ಟು ಬಲಪಡಿಸಲು ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ-ಸಿಬಿಎಸ್ಇ, ತನ್ನ ಎಲ್ಲಾ ಸಂಯೋಜಿತ ಶಾಲೆಗಳಲ್ಲಿ ಶ್ರವಣ, ದೃಶ್ಯ ರೆಕಾರ್ಡಿಂಗ್‌ನೊಂದಿಗೆ ಉನ್ನತ ಗುಣಮಟ್ಟದ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವುದನ್ನು ಕಡ್ಡಾಯಗೊಳಿಸಿದೆ. ಹೊಸ ಮಾನದಂಡಗಳ ಪ್ರಕಾರ, ಶೌಚಾಲಯಗಳನ್ನು ಹೊರತುಪಡಿಸಿ, ಪ್ರವೇಶ ಮತ್ತು ನಿರ್ಗಮನ ದ್ವಾರಗಳು, ಕಾರಿಡಾರ್‌ಗಳು, ಮೆಟ್ಟಿಲುಗಳು, ತರಗತಿ ಕೊಠಡಿಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು, ಕ್ಯಾಂಟೀನ್‌ಗಳು, ಆಟದ ಮೈದಾನಗಳು ಮತ್ತು ಇತರೆ ಸಾಮಾನ್ಯ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು ಎಂದು ಸಿಬಿಎಸ್ಇ ತಿಳಿಸಿದೆ.

**<><><><>**

ಭಾರತದಲ್ಲಿ ೧ ಕೋಟಿ ೫೨ ಲಕ್ಷಕ್ಕೂ ಹೆಚ್ಚು ಸಕ್ರಿಯ ಸರಕು ಮತ್ತು ಸೇವಾ ತೆರಿಗೆ-ಜಿಎಸ್‌ಟಿ ನೋಂದಣಿಗಳು ಚಾಲ್ತಿಯಲ್ಲಿವೆ. ದೇಶದಲ್ಲಿ ಐದನೇ ಒಂದು ಭಾಗದಷ್ಟು ನೋಂದಾಯಿತ ಜಿಎಸ್‌ಟಿ ತೆರಿಗೆದಾರರ ಪೈಕಿ ಕನಿಷ್ಠ ಒಬ್ಬ ಮಹಿಳೆ ಇದ್ದಾರೆ. ಅಲ್ಲದೇ ನೋಂದಾಯಿತ ತೆರಿಗೆದಾರರಲ್ಲಿ ಶೇಕಡ ೧೪ ರಷ್ಟು ಮಹಿಳೆಯರು ಸದಸ್ಯರಾಗಿದ್ದಾರೆ ಎಂದು ಎಸ್‌ಬಿಐ ವರದಿ ಬಹಿರಂಗಪಡಿಸಿದೆ.ಒಟ್ಟಾರೆ ಆದಾಯ ತೆರಿಗೆದಾರರಲ್ಲಿ ಶೇಕಡ ೧೫ ರಷ್ಟು ಮತ್ತು ಒಟ್ಟಾರೆ ಠೇವಣಿಗಳಲ್ಲಿ ಮಹಿಳೆಯರ ಪಾಲು ಶೇಕಡ ೪೦ ರಷ್ಟಿದೆ. ಈ ದತ್ತಾಂಶವು ಮಹಿಳಾ ಸಬಲೀಕರಣವನ್ನು ಪ್ರತಿಬಿಂಬಿಸುತ್ತದೆ ಎಂದು ಎಸ್‌ಬಿಐ ಗ್ರೂಪ್‌ನ ಮುಖ್ಯ ಆರ್ಥಿಕ ಸಲಹೆಗಾರರಾದ ಡಾ. ಸೌಮ್ಯಕಾಂತಿ ಘೋಷ್ ಹೇಳಿದ್ದಾರೆ. ಕೇವಲ ಐದು ವರ್ಷಗಳಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹವು ದ್ವಿಗುಣಗೊಂಡಿದೆ. ಸರಾಸರಿ ಮಾಸಿಕ ಒಟ್ಟು ಜಿಎಸ್‌ಟಿ ಸಂಗ್ರಹವು ಈಗ ೨ ಲಕ್ಷ ಕೋಟಿ ರೂಪಾಯಿ ಆಗಿದೆ ಎಂದು ಅವರು ತಿಳಿಸಿದ್ದಾರೆ.

**<><><><>**

ಭವಿಷ್ಯದ ಅವಶ್ಯಕತೆಗಳನ್ನು ಪೂರೈಸಲು ಪ್ರಸಾರ ಭಾರತಿ, ಸುದ್ದಿ ವಿಭಾಗದಲ್ಲಿ ಎಐ-ಚಾಲಿತ ಪರಿಹಾರಗಳನ್ನು ಪ್ರಾಯೋಗಿಕವಾಗಿ ಬಳಸುತ್ತಿದೆ ಎಂದು ಪ್ರಸಾರ ಭಾರತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಮತ್ತು ಏಷ್ಯಾ –ಪೆಸಿಫಿಕ್ ಪ್ರಸಾರ ಅಭಿವೃದ್ಧಿ ಸಂಸ್ಥೆಯ ಸಾಮಾನ್ಯ ಸಮ್ಮೇಳನದ ಅಧ್ಯಕ್ಷ ಗೌರವ್ ದ್ವಿವೇದಿ ಹೇಳಿದ್ದಾರೆ. ಕಾಂಬೋಡಿಯಾದ ಸೀಮ್ ರೀಪ್‌ನಲ್ಲಿ ನಡೆದ ೨೦ನೇ ಏಷ್ಯಾ ಮಾಧ್ಯಮ ಶೃಂಗಸಭೆ ೨೦೨೫ರ ಉದ್ಘಾಟನಾ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆಯ ತ್ವರಿತ ವಿಕಸನವು ಸುದ್ದಿ ಮತ್ತು ಪ್ರಸಾರ ಉದ್ಯಮವನ್ನು ಮೂಲಭೂತವಾಗಿ ಮರುರೂಪಿಸುತ್ತಿದೆ ಎಂದು ತಿಳಿಸಿದ್ದಾರೆ.

**<><><><>**

ಜಾರ್ಜಿಯಾದ ಬಟುಮಿಯಲ್ಲಿ ನಡೆಯುವ ಫಿಡೆ ಮಹಿಳಾ ಚೆಸ್ ವಿಶ್ವಕಪ್ ೨೦೨೫ರ ಸೆಮಿಫೈನಲ್‌ನಲ್ಲಿ ಇಂದು ಭಾರತದ ಗ್ರ್ಯಾಂಡ್ ಮಾಸ್ಟರ್ ಕೊನೆರು ಹಂಪಿ, ಚೀನಾದ ಗ್ರ್ಯಾಂಡ್ ಮಾಸ್ಟರ್ ಲೀ ಟಿಂಗ್ಜಿ ವಿರುದ್ಧ ಸೆಣಸಲಿದ್ದಾರೆ. ಮತ್ತೊಂದೆಡೆ, ಸೆಮಿಫೈನಲ್‌ನಲ್ಲಿ, ಅಂತಾರಾಷ್ಟ್ರೀಯ ಮಾಸ್ಟರ್ ದಿವ್ಯಾ ದೇಶಮುಖ್, ಚೀನಾದ ಗ್ರ್ಯಾಂಡ್ ಮಾಸ್ಟರ್ ಟಾನ್ ಝೊಂಗ್ಯಿ ಅವರನ್ನು ಎದುರಿಸಲಿದ್ದಾರೆ. ಇದಕ್ಕೂ ಮುನ್ನ ಕ್ಷಿಪ್ರ ಟೈ-ಬ್ರೇಕ್‌ನಲ್ಲಿ, ದಿವ್ಯಾ ದೇಶಮುಖ್ ಅವರು ಗ್ರ್ಯಾಂಡ್ ಮಾಸ್ಟರ್ ಹರಿಕಾ ದ್ರೋಣವಲ್ಲಿ ಅವರನ್ನು ೨-೦ ಅಂತರದಿಂದ ಸೋಲಿಸಿದರು.

<><><><>

ಇಂಗ್ಲೆಂಡ್‌ನ ಚೆಸ್ಟರ್ ಲೇ ಸ್ಟ್ರೀಟ್‌ನಲ್ಲಿ ಇಂದು ಭಾರತ ಮತ್ತು ಇಂಗ್ಲೆಂಡ್ ಮಹಿಳಾ ತಂಡಗಳ ನಡುವಿನ ಏಕದಿನ ಸರಣಿಯ ೩ನೇ ಹಾಗೂ ಕೊನೆಯ ಪಂದ್ಯ ನಡೆಯಲಿದೆ. ಈ ಹಿಂದೆ ನಡೆದ ಪಂದ್ಯಗಳಲ್ಲಿ ಭಾರತ ಮತ್ತು ಇಂಗ್ಲೆಂಡ್ ವನಿತೆಯರು ೧-೧ ರಿಂದ ಸರಣಿಯಲ್ಲಿ ಸಮಬಲ ಸಾಧಿಸಿದ್ದರಿಂದ, ಇಂದಿನ ಪಂದ್ಯ ಬಹಳ ಮಹತ್ವ ಪಡೆದುಕೊಂಡಿದೆ.ಪಂದ್ಯ ಭಾರತೀಯ ಕಾಲಮಾನ ಸಂಜೆ ೫ ಗಂಟೆ ೩೦ ನಿಮಿಷಕ್ಕೆ ಆರಂಭವಾಗಲಿದೆ.

<><><><>

ಫುಟ್‌ಬಾಲ್‌ನಲ್ಲಿ, **SAFF** ೧೭ ವರ್ಷದೊಳಗಿನ ಚಾಂಪಿಯನ್‌ಶಿಪ್‌ಗಾಗಿ ತಂಡಗಳ ಗುಂಪುಗಳನ್ನು ಬಿಡುಗಡೆ ಮಾಡಲಾಗಿದೆ. ಹಾಲಿ ಚಾಂಪಿಯನ್ ಭಾರತ ತಂಡವು ತನ್ನ ಸಾಂಪ್ರದಾಯಿಕ ಎದುರಾಳಿಗಳಾದ ಪಾಕಿಸ್ತಾನ, ಭೂತಾನ್ ಮತ್ತು ಮಾಲ್ಡೀವ್ಸ್ ತಂಡಗಳನ್ನು 'ಎ' ಗುಂಪಿನಲ್ಲಿ ಎದುರಿಸಲಿದೆ. ಮತ್ತೊಂದೆಡೆ, ಶ್ರೀಲಂಕಾ, ಬಾಂಗ್ಲಾದೇಶ ಮತ್ತು ನೇಪಾಳ, 'ಬಿ' ಗುಂಪಿನಲ್ಲಿ ಸೆಣಸಲಿವೆ. ಸೆಪ್ಟೆಂಬರ್ ೧೫ ರಿಂದ ೨೭ ರವರೆಗೆ ಶ್ರೀಲಂಕಾದ ಕೊಲಂಬೊದಲ್ಲಿ ಪಂದ್ಯಾವಳಿ ನಡೆಯಲಿದೆ.

**<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>**